# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103

ದೂರವಾಣಿ: 0816–2254546, 0816–2255596, 0816–2255597 ಫ್ಯಾಕ್ಸ್: 0816–2270719

ಸಂಖ್ಯೆ:ತುವಿತು/2920/ದ.ಆ:ಖ.ಕೋ:2022–23/2215 ದಿನಾಂಕ:27.06.2022

## ದರಪಟ್ಟಿ ಆಹ್ವಾನ (ವಿ.ವಿ ವೆಬ್ ಸೈಟ್ ಮುಖಾಂತರ)

ವಿಷಯ: ICSSR New Delhi ವತಿಯಿಂದ ಮಂಜೂರಾಗಿರುವ ಸಂಶೋಧನಾ ಯೋಜನೆಯನ್ನು ಪ್ರಾರಂಭಿಸಲು ಅಗತ್ಯವಾದ ಲ್ಯಾಪ್‌ಟಾಪ್‌ನ್ನು ಸರಬರಾಜು ಪಡೆಯಲು ದರಪಟ್ಟಿಯನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ಡಾ. ಗುಂಡೇಗೌಡ, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿವಿ ಕಲಾ ಕಾಲೇಜು, ಇವರ ಮನವಿ ಪತ್ರ ದಿನಾಂಕ:30.05.2022.

2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:23.06.2022(ಕಂಡಿಕೆ–95).

*****

ಡಾ. ಗುಂಡೇಗೌಡ, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ ಇವರಿಗೆ ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಸಂರಚನೆಯನ್ವಯ ಹಾಗೂ ಷರತ್ತಿಗೊಳಪಟ್ಟು ಆಸಕ್ತ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| Sl. No. | Computer Name & Specifications | Quantity | Price (inclu All tax) |
|---|---|---|---|
| 01 | 11th Gen Core i3 – 1125G4, RAM – 8GB, HDD5125GB SSD Nvme, Graphics – Intel UHD Graphics, OS – Win11 + office Screen – 15.6" FHD, Withbag. | 01 | |

**ಷರತ್ತುಗಳು:**

1. ಮುಚ್ಚಿದ ಲಕೋಟೆಯ ಮೇಲೆ "ಲ್ಯಾಪ್‌ಟಾಪ್ ಸರಬರಾಜು ಮಾಡಲು ದರಪಟ್ಟಿ" ಎಂದು ನಮೂದಿಸತಕ್ಕದ್ದು.
2. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು–572 103, ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 05.07.2022 ಅಪರಾಹ್ನ 12.00 ಗಂಟೆ.**
4. ದರಪಟ್ಟಿಯನ್ನು **ದಿನಾಂಕ: 06.07.2022** ರಂದು **ಅಪರಾಹ್ನ 04.00ಕ್ಕೆ** ತೆರೆಯಲಾಗುವುದು.
5. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
6. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 60 ದಿನಗಳವರೆಗೆ ಚಾಲ್ತಿಯಲ್ಲಿರುತ್ತದೆ.
7. ಸರಬರಾಜು ಮಾಡಲು ಯಾವುದೇ ಮುಂಗಡ ಹಣವನ್ನು ನೀಡಲಾಗುವುದಿಲ್ಲ.
8. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮೊತ್ತ ಮತ್ತು ಸಾಗಾಣಿಕೆ ಮೊತ್ತವನ್ನು ಒಳಗೊಂಡಿರಬೇಕು.
9. ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಗಳಲ್ಲಿನ ಅತೀ ಕಡಿಮೆ ದರವನ್ನು ಪರಿಗಣಿಸಲಾಗುವುದು.
10. ದರಪಟ್ಟಿಯಲ್ಲಿ ನಮೂದಿಸಿರುವ ಉಪಕರಣಗಳ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.

11. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
12. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ ನಿಯಮಾವಳಿಗೆ ಬದ್ಧವಾಗಿ ಆಯ್ಕೆಮಾಡಲಾಗುವುದು ಮತ್ತು ಇದರಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
13. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ ಲ್ಯಾಪ್‌ಟಾಪ್‌ನ ಸಂರಚನೆಗಳಲ್ಲಿ ವ್ಯತ್ಯಾಸ ಇದ್ದರೆ ಸಂರಚನೆಗಳ ಮಾಹಿತಿಯನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
14. ಷರತ್ತು ಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
15. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
16. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
17. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ

D. Sunanda 27/06/2022

ಉಪಕುಲಸಚಿವರು
(ಸಾಮಾನ್ಯ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು (ಪ್ರ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಡಾ. ಗುಂಡೇಗೌಡ, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
4. ರಕ್ಷಣಾ ಪ್ರತಿ.